ಅನ್ಯಾಯ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಾವು ಸೂಕ್ತ ಕ್ರಮ ತೆಗೆದುಕೊಂಡು ವಕೀಲ ವೃಂದದ ಹೋರಾಟಕ್ಕೆ ಮಾನ್ಯತೆ ನೀಡಬೇಕೆಂಬುದಕ್ಕೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ —ಮಾನ್ಯ ಅಧ್ಯಕ್ಷರೇ, ಗೃಹ ಮಂತ್ರಿಗಳಿಂದ ಉತ್ತರ ತರಿಸಿ ಹೇಳಿಕೆ ನೀಡಲು ನಾನು ತಿಳಿಸುತ್ತೇನೆ.

VII. ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಪ್ರಾಥಮಿಕ ಶಾಲೆಗಳಿಗೆ ಜವಾನರನ್ನು ನೇಮಿಸುವುದು

ಶ್ರೀ ಬಿ. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೆ, ತಮ್ಮ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಈ ಹಿಂದೆ ಆಟೆಂಡರ್ ಅಥವಾ ಪೀವನ್‌ಗಳಿದ್ದರು. ಆದರೆ ಸದರಿ ಆಟೆಂಡರ್‌ಗಳ ಸೇವೆಯನ್ನು ಪ್ರೌಢಶಾಲೆಗಳಿಗೆ ವರ್ಗಾಯಿಸಿರುವುದರಿಂದ ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಗಳಲ್ಲಿ ಪೀವನ್ ಅಥವಾ ಆಟೆಂಡರ್‌ಗಳ ಬದಲಿ ಸೇವೆ ಮಾಡಬೇಕಾಗಿದೆ, ಇದು ತಪ್ಪಬೇಕು. ಹಿಂದೆ ಇದ್ದಂತೆ ಅವರ ಸೇವೆಯನ್ನು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಮೀಸಲಿಡಲು ಸಾಧ್ಯವಿಲ್ಲವೇ ? ವಿದ್ಯಾರ್ಥಿಗಳಿಂದ ಆ ಸೇವೆ ಮಾಡಿಸುವುದು ಸರಿಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಇದು ವಿದ್ಯಾ ಮಂತ್ರಿಗಳಿಗೆ ಸಂಬಂಧಪಟ್ಟದ್ದಾದು. ಇದನ್ನು ಅವರಿಗೆ ತಿಳಿಸಿ, ಉತ್ತರ ತರಿಸುತ್ತೇನೆ.

VIII. ಗದಗ ತಾಲ್ಲೂಕು ಕೋಟುಮಂಚಗಿ ಗ್ರಾಮಕ್ಕೆ ನಾರಾಯಣಪುರದ ಕೊಳದ ಬಾವಿಯಿಂದ ನೀರು ಸರಬರಾಜು ಮಾಡುವುದು ಅಸ್ತವ್ಯಸ್ತವಾಗಿರುವುದು

ಶ್ರೀ ಜ್ಞಾನದೇವ ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೆ, ಗದಗ ತಾಲ್ಲೂಕು ಕೋಟುಮಂಚಗಿ ಗ್ರಾಮಕ್ಕೆ ನಾರಾಯಣಪುರ ಕೊಳವೆ ಬಾವಿಯಿಂದ ಕುಡಿಯುವ ನೀರು ಸರಬರಾಜು ಆಗುತ್ತಿದ್ದು, ಸಬ್ ಮರ್ಸಿಬಲ್ ಪಂಪು ಕೆಟ್ಟಿದ್ದರಿಂದ ಒಂದು ತಿಂಗಳಿಂದಲೂ ನೀರು ಸರಬರಾಜಾಗುತ್ತಿಲ್ಲ. ರಿಪೇರಿ ನಡೆಯುತ್ತಿದ್ದರೂ ಕೆಲಸವಾಗಿಲ್ಲ. ಜನರಿಗೆ ಕುಡಿಯುವ ನೀರಿನ ತೊಂದರೆಯಿರುವುದರಿಂದ, ಇನ್ನೊಂದು ಸಬ್‌ಮರ್ಸಿಬಲ್ ಪಂಪನ್ನು ರಿಪೇರಿಯಾಗುವವರೆಗೆ ಇಳವಡಿಸುವಂತಾಗಬೇಕು. ಕೂಡಲೇ ಸಂಬಂಧಪಟ್ಟ ಇಲಾಖೆಯವರಿಗೆ ಕ್ರಮ ತೆಗೆದುಕೊಳ್ಳಲು ತಾವು ಆದೇಶ ನೀಡಬೇಕು. ಈಗಾಗಲೇ ಕೋಟುಮಂಚಗಿ ಗ್ರಾಮದ ಜನರು ಕುಡಿಯುವ ನೀರಿನಲ್ಲಿ ಆಗಿರುವ ತೊಂದರೆಗಳನ್ನು ತವಂಗೆ ಎಷ್ಟೋ ತೊಂದರೆಯಾವರೂ ಸಹಿಸುತ್ತಾ ಬಂದಿದ್ದಾರೆ. ಅವರ ಸಹನೆಯನ್ನು ಇನ್ನು ವಿಳಂಬಮಾಡಿ ಕೆಣಕುವುದು ಬೇಡ, ಸಂಬಂಧಪಟ್ಟವರನ್ನು ವಿಚಾರಿಸಿದಾಗ, ಇನ್ನುವರೆಗೂ ಸಬ್‌ಮರ್ಸಿಬಲ್ ಪಂಪ್ ರಿಪೇರಿಯಾಗಿಲ್ಲವೆಂದು ತಿಳಿಯಿತು. ಗದಗ ತಾಲ್ಲೂಕಿನ ಕನಿಗಿನಹಾಳದಲ್ಲಿಯೂ ಕೂಡ ಕುಡಿಯುವ ನೀರಿನ ಸಮಸ್ಯೆಯಿದ್ದು, ಗ್ರಾಮೀಣ ನೀರು ಸರಬರಾಜು ಯೋಜನೆಯಲ್ಲಿ ಮಂಜೂರಾದ ಕುಡಿಯುವ ನೀರಿನ ಯೋಜನೆಯಿಂದ ಕಾರ್ಯಾಚರಣೆ ಕೂಡಲೇ ಆಗಬೇಕು. ಪೈಪ್‌ಲೈನ್ ಕೆಲಮಟ್ಟಿಗೆ ಎಳೆದಿದ್ದು ತ್ವರಿತವಾಗಿ ಈ ತೋಡಿರುವ ಕೊಳವೆ ಬಾವಿಗೆ ಸಬ್‌ಮರ್ಸಿಬಲ್ ಕೂಡಿಸಿ, ಗ್ರಾಮಕ್ಕೆ ನೀರು ಸರಬರಾಜು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಬಿ. ಆರ್. ಯಾವಗಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಗದಗ ತಾಲ್ಲೂಕು ಕೋಟುಮಂಚಗಿ ಗ್ರಾಮದ ಸಬ್ ಮರ್ಸಿಬಲ್ ಪಂಪ್ ಕೆಟ್ಟಿದ್ದು, ದಿನಾಂಕ ೧೬ನೇ ಮಾರ್ಚ್ ೧೯೮೬ ರಂದು ಅದರ ಬದಲಾಗಿ ಬೇರೆ ಪಂಪನ್ನು ಕೂಡಿಸಿ, ಅದೇ ದಿನದಿಂದ ಗ್ರಾಮಸ್ಥರಿಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಅದೇ ತಾಲ್ಲೂಕಿನ ಕನಿಗಿನಹಾಳದಲ್ಲಿ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಪೈಪ್ ಲೈನ್ ಹಾಕಿದ್ದು, ಇನ್ನೂ ಸ್ವಲ್ಪ ಭಾಗಕ್ಕೆ ಪೈಪ್ ಹಾಕಬೇಕಾಗಿದೆ. ಸಧ್ಯಕ್ಕೆ, ಪೈಪ್‌ಗಳ ಕೊರತೆಯಿಂದ ಕಾರ್ಯ ಸ್ಥಗಿತಗೊಂಡಿದೆ. ತ್ವರಿತಗತಿಯಲ್ಲಿ ಅದನ್ನು ಮುಗಿಸಲು ಕ್ರಮ ಕೈಗೊಳ್ಳಲಾಗುವುದು.